


ಪತ್ನಿ: ರೀ, ಸಂಜೆ ಮನೆಗೆ ಬರುವಾಗ ಲಿಪ್‌ಸ್ಟಿಕ್ ತನ್ನಿ...

ಪತಿ: ಮೊನ್ನೆ ತಾನೇ ತಂದಿದ್ದೆನಲ್ಲೇ...?

ಪತ್ನಿ: ಅದು ಖಾಲಿಯಾಗಿದೆ ಕಣ್ರೀ...

ಪತಿ: ಏನೇ ತಿಂಗಳಿಗೆ 500 ಗ್ರಾಂ ಲಿಪ್ ಸ್ಟಿಕ್ ತಿಂತೀಯಾ..?

ಪತ್ನಿ: (ನಾಚುತ್ತಾ) ಏನ್ ಮಾಡ್ಲಿ ರೀ, ಅದರಲ್ಲಿ 450 ಗ್ರಾಂ ನಿಮ್ಮ ತುಟಿಗಳೇ ತೆಗೀತಾವೆ!

★★★

ಮರಿಗುಂಡ ತನ್ನ ಗಣಿತ ಪುಸ್ತಕದಲ್ಲಿ ಬರೆದ ಮುದ್ದು ಪಂಕ್ತಿಗಳು...

'ಪ್ರಿಯ ಗಣಿತವೇ, ಎಲ್ಲಿಯವರೆಗೆ ಹೀಗಿರುವೆ? ಬೆಳೆದು ನೀನೂ ದೊಡ್ಡವನಾಗಿ ನಿನ್ನ ಪ್ರಾಬ್ಲಮ್‌ಗಳನ್ನು ನೀನೇ ಪರಿಹರಿಸಿಕೋ. ನನಗೆ ನನ್ನದೇ ಆದ ಪ್ರಾಬ್ಲಮ್‌ಗಳು ಬೇಕಾದಷ್ಟಿವೆ!'

★★★

ಕಂಪ್ಯೂಟರ್ ಹ್ಯಾಕಿಂಗ್ ಪರಿಶೋಧಕನ ಹುದ್ದೆಗೆ ಗುಂಡ ಐಟಿ ಕಂಪೆನಿಯೊಂದರಿಂದ ಸಂದರ್ಶನಕ್ಕೆ ಹೋದ.

ಸಂದರ್ಶಕರು: ಈ ಹುದ್ದೆಗೆ ನೀನು ಹೇಗೆ ಸೂಕ್ತ ಎಂದು ನಿರೂಪಿಸಬಲ್ಲೆಯಾ?

ಗುಂಡ: ನಾನು ನಿಮ್ಮ ಕಂಪ್ಯೂಟರ್‌ಅನ್ನು ಹ್ಯಾಕ್ ಮಾಡಿರುತ್ತೇನೆ, ನನ್ನನ್ನು ನಾನೇ ಈ ಹುದ್ದೆಗೆ ಸಂದರ್ಶನಕ್ಕೆ ಕರೆದಿದ್ದೇನೆ.

★★★

ಸ್ನೇಹಿತರ ದಿನದಂದು ಗುಂಡನ ಸ್ವಗತ.

'ನನ್ನ ಮಿತ್ರರು ನಿನ್ನೆ ರಾತ್ರಿ 12 ಗಂಟೆಯಿಂದ ಸ್ನೇಹಿತರ ದಿನದ ಶುಭಾಶಯಗಳನ್ನು ಎಡೆಬಿಡದೆ ವಾಟ್ಸ್‌ಆ್ಯಪ್, ಫೇಸ್‌ಬುಕ್‌ಗಳಲ್ಲಿ ರವಾನಿಸುತ್ತಿದ್ದಾರೆ.

ಆದರೆ ಇದೇ ಮಿತ್ರರಲ್ಲಿ 1 ಸಾವಿರ ರೂಪಾಯಿ ಕೈಗಡ ಕೇಳಿದರೆ ನಂತರ 10 ದಿನಗಳ ತನಕ ಫೋನ್ ಕೂಡಾ ಎತ್ತುವುದಿಲ್ಲ!

★★★

ಎಂಜಿನಿಯರ್ ಗುಂಡ ತನ್ನ ವರ್ಕ್ ಶಾಪ್‌ನಲ್ಲಿ ಬೈಕ್ ಎಂಜಿನ್ ದುರಸ್ತಿ ಕಾರ್ಯದಲ್ಲಿ ತೊಡಗಿದ್ದಾಗ ನಗರ ಪ್ರಸಿದ್ಧ ಹೃದಯ ತಜ್ಞರು ಅಲ್ಲಿಗೆ ಬಂದರು.

ಗುಂಡ: (ಅವರ ಬಳಿ ತೆರಳಿ ಹೇಳಿದ) ನಾನು ಈ ಎಂಜಿನಿನ ಹೃದಯ ಮತ್ತು ಕವಾಟುಗಳನ್ನು ಹೊರತೆಗೆದು ದುರಸ್ತಿಗೊಳಿಸಿ ಮತ್ತೆ ಲಗತಿಸುತ್ತೇನೆ. ನೀವೂ ಇದೇ ಕೆಲಸ ಮಾಡುತ್ತೀರಿ. ಆದರೆ ನನಗೇಕೆ ನಿಮಗಿಂತ ಕಡಿಮೆ ಸಂಬಳ ಸಿಗುತ್ತದೆ?

ವೈದ್ಯರು: (ಗುಂಡನ ಕಿವಿಯ ಹತ್ತಿರ ಬಂದು ಉಸುರಿಸದರು) ಇದೇ ಕೆಲಸವನ್ನು ಎಂಜಿನ್ ಚಾಲು ಮಾಡಲು ಯತ್ನಿಸಿ ನೋಡು. ಆಗ ತಿಳಿಯುತ್ತದೆ!

ಪಟ್ಟು ಬಿಡದ ಗುಂಡ ಮುಗುಳ್ನಕ್ಕು ಡಾಕ್ಟರ್ ಕಿವಿಯ ಸನಿಹ ಸರಿದು ಹೇಳಿದ. 'ನಾನು ಸತ್ತ ಇಂಜಿನ್‌ಗೂ ಚಿಕಿತ್ಸೆ ನೀಡಿ ಸಜೀವಗೊಳಿಸಿ ಚಾಲೂ ಮಾಡಬಲ್ಲೆ'

**(ಸಂಗ್ರಹ) ರಮಣ್ ಶೆಟ್ಟಿ**
**ರೆಂಜಾಳ್, ಮುಂಬೈ**

ಒಬ್ಬ ಧಡೂತಿ ಮಹಿಳೆ ಯಾವಾಗಲೂ ಕನ್ನಡಕವಿಲ್ಲದೆ ತನ್ನ ತೂಕವನ್ನು ನೋಡಿಕೊಳ್ಳುತ್ತಿದ್ದಳು. ಆಗ ಅವಳ ತೂಕ 68 ಕೆ.ಜಿ. ಇರುತ್ತಿತ್ತು. ಒಂದು ಸಲ ಅವಳು ಕನ್ನಡಕ ಧರಿಸಿ ತನ್ನ ತೂಕವನ್ನು ನೋಡಿಕೊಂಡಾಗ ತೂಕದ ಯಂತ್ರ 88 ಕೆ.ಜಿ. ತೋರಿಸಿತು. ಮಹಿಳೆ ಉದ್ಗರಿಸಿದಳು: ಅಬ್ಬಾ, ಕನ್ನಡಕದ ತೂಕ 20 ಕೆ.ಜಿ!

★★★

ಮೂವರಿಗೆ ಗಲ್ಲು ಶಿಕ್ಷೆಯನ್ನು ನೀಡಬೇಕಾಗಿತ್ತು. ಅವರಿಗೆ ಗಲ್ಲು ನೀಡಬೇಕಾದ ಸ್ಥಳದ ಕೆಳಗೆ ಒಂದು ದೊಡ್ಡ ನೀರಿನ ಹೊಂಡವಿತ್ತು.

ಮೊದಲನೆಯ ಕೈದಿಗೆ ಗಲ್ಲು ನೀಡಲು ಗಲ್ಲು ನೀಡುವವನು ಅವನ ಕುತ್ತಿಗೆಗೆ ಹಗ್ಗದ ಕುಣಿಕೆ ಹಾಕಿದ. ಆದರೆ ಕುಣಿಕೆಯ ಗಂಟು ಸರಿಯಾಗಿ ಬಿದ್ದಿರದ ಕಾರಣ ಕುಣಿಕೆಯ ಗಂಟು ಬಿಚ್ಚಿ ಅವನು ನೀರಿನ ಹೊಂಡಕ್ಕೆ ಬಿದ್ದುಬಿಟ್ಟ. ಅವನಿಗೆ ಈಜು ಬರುತ್ತಿದ್ದರಿಂದ ಈಜಿ ದಡ ಸೇರಿದ.

ಎರಡನೆಯ ಕೈದಿಯ ವಿಷಯದಲ್ಲಿಯೂ ಹಾಗೆಯೇ ಆಯಿತು.

ಮೂರನೆಯ ಕೈದಿಯ ಕುತ್ತಿಗೆಗೆ ನೇಣಿನ ಕುಣಿಕೆ ಹಾಕುತ್ತಿದ್ದಾಗ ಅವನು ಹೇಳಿದ: ಕುಣಿಕೆಯನ್ನು ಗಟ್ಟಿಯಾಗಿ ಹಾಕು ಮಹಾರಾಯ, ನನಗೆ ಈಜಲು ಬರುವುದಿಲ್ಲ.

**(ಸಂಗ್ರಹ) ಮುರಳೀಧರ ಕುಲಕರ್ಣಿ**




ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450